ಓ.ಎಸ್.ನಂ.**69/2022**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **30.01.2026**.
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 5ನೇ ಪ್ರತಿವಾದಿ ಪರ ಶ್ರೀ ಕೆ.ಎಂ. ವಕೀಲರಿಂದ**

ನಿ.ಡಿ.**1** ರಲ್ಲಿ ನಿಮ್ಮ ಗಂಡನ ಹೆಸರು ಆವಲಪ್ಪ ಎಂದು ನಮೂದಾಗಿದ್ದು**,** ಸದರಿ ಹೆಸರನ್ನು ಯಾವಾಗ ಬದಲಾವಣೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ನನ್ನ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯಲ್ಲಿ ನನ್ನ ಗಂಡನ ಹೆಸರು ಪಾಪಣ್ಣ ಎಂದು ನಮೂದಾಗಿದೆ. ನಿಮ್ಮ ಗಂಡನ ಹೆಸರು ಆವಲಪ್ಪ ಎಂದು ಇರುವುದನ್ನು ಯಾವಾಗ ಬದಲಾವಣೆ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಯಾವುದೇ ಬದಲಾವಣೆ ಮಾಡಿಸಿಲ್ಲ ಎಂದು ಹೇಳುತ್ತಾರೆ. ನಾನು ಈಗ ಹಾಜರುಪಡಿಸಿದ ಚುನಾವಣಾ ಗುರುತಿನ ಚೀಟಿಯು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರನ್ನು ಆವಲಪ್ಪನಿಂದ ಪಾಪಣ್ಣ ಎಂದು ಬದಲಾಯಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ **3**ನೇ ಪ್ರತಿವಾದಿಯ ಮಗನಾದ ಸುರೇಶ್ ಎಂಬ ವ್ಯಕ್ತಿಯು ಚುನಾವಣಾ ಅಧಿಕಾರಿಗೆ ತಕರಾರು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ತಕರಾರಿನ ಆಧಾರದ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಊರಿಗೆ ಬಂದು ತನಿಖೆ ಮತ್ತು ಮಹಜರು ಮಾಡಿ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ವರದಿಯಲ್ಲಿ ಹೆಸರು ಬದಲಾವಣೆ ಮಾಡಿರುವುದು ಅಕ್ರಮ ಎಂದು ನಮೂದಿಸಿ ಪಾಪಣ್ಣ ಎಂಬ ಹೆಸರನ್ನು ಕೈಬಿಟ್ಟು**,** ನನ್ನ ಗಂಡನ ಹೆಸರು ಆವಲಪ್ಪ ಎಂದು ಆದೇಶಿಸಲಾಗಿದೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಈ ಬಗ್ಗೆ ಯಾರು ವಿಚಾರಣೆ ಮಾಡಿಲ್ಲ ಎಂದು ಹೇಳುತ್ತಾರೆ.

ನನ್ನ ಮದುವೆಯ ಸಮಯದಲ್ಲಿ ಚಿಕ್ಕಬಳ್ಳಾಪುರ ಮತ್ತು ಗುಡಿಬಂಡೆಯಲ್ಲಿ ಪ್ರಿಟಿಂಗ್ ಪ್ರೆಸ್ ಇತ್ತು ಎಂದರೆ ಸರಿಯಲ್ಲ. ನನ್ನ ಮದುವೆಯ ಸಮಯದಲ್ಲಿ ಆಮಂತ್ರಣ ಪತ್ರಿಕೆ ಮಾಡಿಸಿದ್ದೆವು. ನನ್ನ ಗಂಡನ ಮನೆಯವರು ದೊಡ್ಡಬಳ್ಳಾಪುರ ಪ್ರಿಟಿಂಗ್ ಪ್ರೆಸ್ ನಲ್ಲಿ ಆಮಂತ್ರಣ ಪತ್ರಿಕೆ ಮಾಡಿಸಿದ್ದರು ಹಾಗೂ ನಮ್ಮ ಮನೆಯವರು ಗುಡಿಬಂಡೆಯ ಪ್ರಿಟಿಂಗ್ ಪ್ರೆಸ್ ನಲ್ಲಿ ಮಾಡಿಸಿರುತ್ತಾರೆ. ನನ್ನ ಗಂಡನ ಮನೆಯವರು ದೊಡ್ಡಬಳ್ಳಾಪುರದ ಯಾವ ಪ್ರಿಟಿಂಗ್ ಪ್ರೆಸ್ ನಲ್ಲಿ ಆಮಂತ್ರಣ ಪತ್ರಿಕೆ ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. **40–45** ವರ್ಷದಿಂದ ಗಂಡನಿಂದ ದೂರ ಇದ್ದೇನೆ ಎಂದು ಹೇಳಿದ್ದು, ಈಗಲೂ ಕೂಡ ಆಮಂತ್ರಣ ಪತ್ರಿಕೆಯನ್ನು ಇಟ್ಟುಕೊಂಡಿದ್ದೀರಾ? ಎಂದರೆ ಹೌದು. ನ್ಯಾಯಾಲಯಕ್ಕೆ ಲಗ್ನ ಪತ್ರಿಕೆಯನ್ನು ಕೊಟ್ಟಿದ್ದೀರಾ? ಎಂದರೆ ಹೌದು. ನಿ.ಪಿ.**15** – ಲಗ್ನ ಪತ್ರಿಕೆಯನ್ನು ದೊಡ್ಡಬಳ್ಳಾಪುರದ ಶ್ರೀರಾಮ್ ಪ್ರಿಂಟರ್ಸ್ ನಲ್ಲಿ ಮುದ್ರಣವಾಗಿದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. **1985** ರಲ್ಲಿ ದೊಡ್ಡಬಳ್ಳಾಪುರದಲ್ಲಿ ಯಾವುದೇ ಶ್ರೀರಾಮ್ ಪ್ರಿಂಟರ್ಸ್ ಇರಲಿಲ್ಲ ಎಂದರೆ ಗೊತ್ತಿಲ್ಲ. ಈಗ ದೊಡ್ಡಬಳ್ಳಾಪುರದಲ್ಲಿ ಶ್ರೀರಾಮ್ ಪ್ರಿಂಟರ್ಸ್ ಇದೆಯಾ? ಎಂದರೆ ಗೊತ್ತಿಲ್ಲ. **1985** ರಲ್ಲಿ ಸದರಿ ಪತ್ರಿಕೆಯನ್ನು ದೊಡ್ಡಬಳ್ಳಾಪುರದ ಶ್ರೀರಾಮ್ ಪ್ರಿಂಟರ್ಸ್ ನಲ್ಲಿ ಮಾಡಿಸಿಲ್ಲ, ಆದರೆ ಕೇಸಿಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಶ್ರೀರಾಮ್ ಪ್ರಿಂಟರ್ಸ್ ರವರನ್ನು ಕರೆಸಿ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಸಬಹುದಾ? ಎಂದರೆ ಸಾಕ್ಷಿಯು ಅವರು ಎಲ್ಲಿದ್ದಾರೆಂದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಪಾಪಣ್ಣನವರನ್ನು ಮದುವೆಯಾಗದೇ ಇರುವ ಕಾರಣ ಸದರಿ ಪ್ರಿಟಿಂಗ್ ಪ್ರೆಸ್ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯ ಮನೆಯಲ್ಲಿ ಗುಡಿಬಂಡೆಯ ಪ್ರಿಟಿಂಗ್ ಪ್ರೆಸ್ ನಲ್ಲಿ ಲಗ್ನ ಪತ್ರಿಕೆ ಮಾಡಿಸಿದ್ದಾರೆಂದು ತಿಳಿಸಿದ್ದು, ಸದರಿ ಪತ್ರಿಕೆ ಇದೆಯಾ ಎಂದರೆ ಇರಬಹುದು ಮುಂದಿನ ದಿನಾಂಕದಲ್ಲಿ ತಂದು ಕೊಡುತ್ತೇನೆ.

ಪಾಪಣ್ಣನವರ ತಾತ ಮತ್ತು ಅಜ್ಜಿಯ ಹೆಸರು ಗೊತ್ತಾ? ಎಂದರೆ ಇಲ್ಲ. ಅದೇ ರೀತಿ ಅವರ ಅಜ್ಜಿ–ತಾತನಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದರೆ ಗೊತ್ತಿಲ್ಲ. ಪಾಪಣ್ಣನವರ ತಂದೆ ಮತ್ತು ಅವರ ಅಣ್ಣ–ತಮ್ಮಂದಿರಿಗೆ ಎಷ್ಟು ಆಸ್ತಿಗಳಿವೆ ಎಂದರೆ

ಗೊತ್ತಿಲ್ಲ. ದಾವಾ ಆಸ್ತಿಗಳು ಪಾಪಣ್ಣನವರಿಗೆ ಹೇಗೆ ಬಂತು ಎಂದರೆ ಗೊತ್ತಿಲ್ಲ. ಪಾಪಣ್ಣನವರ ತಂದೆಗೆ ಎಷ್ಟು ಆಸ್ತಿಗಳು ಇದ್ದವು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ಮೂಲತಃ ಯಾರಿಗೆ ಸೇರಿದ್ದವು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೂ ಪಾಪಣ್ಣನವರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಾಪಣ್ಣನವರ ಪಿತ್ರಾರ್ಜಿತ ಆಸ್ತಿಗಳು ಎಂದು ತಿಳಿಸಿದ್ದು, ಅವರಿಗೆ ಹೇಗೆ ಬಂತು ಎಂದರೆ ಗೊತ್ತಿಲ್ಲ. ಕೋಟಪ್ಪನಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳಿದ್ದಾರೆ. ಅವರುಗಳೆಂದರೆ ಹನುಮಕ್ಕ, ಮುನಿಜಯಮ್ಮ, ಮುನಿಮಂಗಮ್ಮ, ಪಾಪಣ್ಣ ಮತ್ತು ಮುನಿರಾಜು. ಮುನಿರಾಜುವಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ ಸುರೇಶ ಮತ್ತು ಆನಂದ ಮತ್ತು ಇನ್ನೊಬ್ಬರ ಹೆಸರು ಗೊತ್ತಿಲ್ಲ. ನಾನು ಅವರ ಕುಟುಂಬದವಳಲ್ಲದೇ ಇರುವ ಕಾರಣ ಅವರ ಹೆಸರು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರ್, ಚಕ್ಕುಬಂಧಿ ಮತ್ತು ವಿಸ್ತೀರ್ಣ ಗೊತ್ತಿಲ್ಲ. ನನಗೂ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುನಿಜಯಮ್ಮ ನನ್ನೊಂದಿಗೆ ಚೆನ್ನಾಗಿದ್ದಾರೆ. ಅವರು ಪಾಪಣ್ಣನ ಅಕ್ಕ ಎಂದರೆ ಸರಿ. ಸದರಿ ಮುನಿಜಯಮ್ಮನವರು ಇದೇ ನ್ಯಾಯಾಲಯದಲ್ಲಿ ಭಾಗ ಕೇಳಿ ಅಸಲು ದಾವೆ ಸಂಖ್ಯೆ:**249/2012** ರಲ್ಲಿ ದಾವಾ ಹಾಕಿದ್ದಾರೆ ಎಂದರೆ ಸರಿ. ಸದರಿ ದಾವೆಯು ಬಾಕಿ ಇದೆ ಎಂದರೆ ಸರಿ. ಸದರಿ ಕೇಸಿನಲ್ಲಿ ಪಾಪಣ್ಣನವರು ಪ್ರತಿವಾದಿಯಾಗಿದ್ದಾರೆ ಎಂದರೆ ಸರಿ. ಪಾಪಣ್ಣನವರು ಮೃತಪಟ್ಟ ನಂತರ ಸದರಿ ಕೇಸಿನಲ್ಲಿ ನನ್ನನ್ನು ಸೇರಿಸಿದ್ದಾರೆ ಎಂದರೆ ಸರಿ. ಸದರಿ ಕೇಸಿನಲ್ಲಿ ನಾನು ಹಾಜರಾಗಿ ವಕೀಲರನ್ನು ನೇಮಕ ಮಾಡಿಕೊಂಡಿಲ್ಲ ಎಂದರೆ ಸರಿ. ನಾನು ಪಾಪಣ್ಣನ ವಿರುದ್ಧ ಹಾಕಿದ್ದ ಜೀವನಾಂಶ ಪ್ರಕರಣದಲ್ಲಿ ಮುನಿಜಯಮ್ಮನವರು ನನ್ನ ಪರವಾಗಿ ಸಾಕ್ಷ್ಯ ಹೇಳಿದ್ದಾರೆ ಎಂದರೆ ಸರಿ. ಸದರಿ ಜೀವನಾಂಶ ಕೇಸಿನ ಆದೇಶದ ವಿರುದ್ಧ ಪಾಪಣ್ಣನವರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ಬಾಕಿ ಇರುವಾಗ ಪಾಪಣ್ಣನವರು ಮೃತಪಟ್ಟಿದ್ದಾರೆ ಎಂದರೆ ಸರಿ.

ಅಸಲು ದಾವೆ ಸಂಖ್ಯೆ:**249/2012** ರಲ್ಲಿ ನಾನು ಪಕ್ಷಗಾರಳಾಗಿದ್ದು, ಅದೇ ಕೇಸಿನಲ್ಲಿ ನಾನು ಭಾಗ ಕೇಳುವ ಅವಕಾಶವಿದ್ದರೂ ಕೂಡ ನಾನು ವಿನಾ ಕಾರಣ ಇನ್ನೊಂದು ದಾವೆಯನ್ನು ಹಾಕಿದ್ದೇನೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿರುವ ಆಸ್ತಿಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಗೊತ್ತಿಲ್ಲ.

**1998** ರಲ್ಲಿ ಪಾಪಣ್ಣನವರ ಅಣ್ಣ–ತಮ್ಮಂದಿರ ನಡುವೆ ಆದ ವಿಭಾಗದಲ್ಲಿ ಹೆಣ್ಣು ಮಕ್ಕಳಿಗೆ ಸರ್ವೆ ನಂ.**296** ರಲ್ಲಿ **10** ಗುಂಟೆಯನ್ನು ಬಿಟ್ಟಿದ್ದರು ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಈ ಕೇಸಿನಲ್ಲಿ ಸೇರಿಸಿದ್ದೀರಾ? ಎಂದರೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ವಿಭಾಗ ಮಾಡಿಕೊಂಡಿರುವ ಬಗ್ಗೆ ನಿಮಗೆ ಗೊತ್ತಾ ಎಂದರೆ ಇಲ್ಲ. ಈ ಕೇಸಿನಲ್ಲಿ ಸದರಿ ಆಸ್ತಿಯನ್ನು ಹಾಗೂ ಅದನ್ನು ಖರೀದಿ ಮಾಡಿರುವ ಧನಪಾಲ್, ರತ್ನಮ್ಮ, ತಿಮ್ಮಯ್ಯ, ಶಿವಕುಮಾರ್, ಗಾಯಿತ್ರಮ್ಮ, ಕು.ಲಾವಣ್ಯ, ಕು.ನವ್ಯ, ಆನಂದ, ಪ್ರೇಮ ಮತ್ತು ಐಶ್ವರ್ಯ ನವರುಗಳನ್ನು ಈ ಕೇಸಿನಲ್ಲಿ ಸೇರಿಸಿರುವುದಿಲ್ಲ ಎಂದರೆ ಗೊತ್ತಿಲ್ಲ.  ಈ ಕೇಸನ್ನು ಯಾರ ಯಾರ ವಿರುದ್ದ ಹಾಕಿದ್ದೀರಾ? ಎಂದರೆ ಗೊತ್ತಿಲ್ಲ. ನಾನು ನನ್ನ ಗಂಡನ ಆಸ್ತಿಯಲ್ಲಿ ಭಾಗ ಕೇಳಿ ಈ ದಾವೆಯನ್ನು ಹಾಕಿದ್ದೇನೆ. ಪಾಪಣ್ಣನವರು ಮೂರು ವರ್ಷದ ಹಿಂದೆ ಮೃತಪಟ್ಟಿದ್ದಾರೆ, ಆದರೆ ನಿಖರವಾದ ದಿನಾಂಕ ಹೇಳಲು ಅಗುವುದಿಲ್ಲ. ಅವರು ಬೆಂಗಳೂರಿನಲ್ಲಿ ಮೃತಪಟ್ಟಿದ್ದರು, ಅವರನ್ನು ಊರಿಗೆ ತಂದ ನಂತರ ನಾನು ಹೋಗಿ ನೋಡಿರುತ್ತೇನೆ. ಅವರ ಅಂತ್ಯ ಸಂಸ್ಕಾರವನ್ನು ಮುನಿರಾಜು ರವರು ಮಾಡಿದ್ದಾರೆ. ಅವರ ಅಂತ್ಯ ಸಂಸ್ಕಾರವನ್ನು ಅವರ ಊರಿನ ಸ್ಮಶಾನದಲ್ಲಿ ಮಾಡಿರುತ್ತಾರೆ.  ಪಾಪಣ್ಣನವರ ಕಾನೂನು ಬದ್ದ ಹೆಂಡತಿಯಾಗಿದ್ದರೆ ನೀವೇ ಅಂತ್ಯ ಸಂಸ್ಕಾರವನ್ನು ಮಾಡಬೇಕಾಗಿತ್ತು ಎಂದರೆ ಸಾಕ್ಷಿಯು ಅವರೇ ನನ್ನನ್ನು ಕಳುಹಿಸಿದ್ದರು, ನಾನು ಇಲ್ಲೇ ಇದ್ದಿದ್ದರೆ ನಾನು ಮಾಡುತ್ತಿದ್ದೆ ಎಂದು ಉತ್ತರಿಸುತ್ತಾರೆ. ನಾನು ಪಾಪಣ್ಣನವರ ಹೆಂಡತಿಯಲ್ಲ ಎಂದರೆ ಸರಿಯಲ್ಲ. **2012** ರಲ್ಲಿ ಹಿಸ್ಸೆ ದಾವೆ ಹಾಕಿದ ನಂತರ ಮುನಿಜಯಮ್ಮನವರು ನನ್ನನ್ನು ಕರೆದುಕೊಂಡು ಬಂದು ಸುಳ್ಳು ಕೇಸನ್ನು ಹಾಕಿಸಿದ್ದರು ಎಂದರೆ ಸರಿಯಲ್ಲ. ಸದರಿ ಹಿಸ್ಸೆ ದಾವೆ ಹಾಕುವ ಪೂರ್ವದಲ್ಲಿ ನಾನು ಗಂಡನ ಮೇಲೆ ಜೀವನಾಂಶಕ್ಕಾಗಲೀ ಅಥವಾ ಭಾಗಬೇಕೆಂದು ಯಾವುದೇ

ಕೇಸನ್ನು ಹಾಕಿರಲಿಲ್ಲ ಎಂದರೆ ಸಾಕ್ಷಿಯು ನಾನು **2012** ರ ಪೂರ್ವದಲ್ಲೇ ಪಾಪಣ್ಣನವರಿಗೆ ನನ್ನನ್ನು ಕರೆದುಕೊಂಡು ಹೋಗಿ ಜೀವನ ನಡೆಸಿ ಎಂದು ಹೇಳಿ ನೋಟೀಸ್ ಕೊಟ್ಟಿದ್ದೆನು. ಸದರಿ ನೋಟೀಸ್ ನೀಡಿದ ದಿನಾಂಕ ಗೊತ್ತಿಲ್ಲ. ನಾನು ಪಾಪಣ್ಣನವರಿಗೆ ಯಾವುದೇ ನೋಟೀಸ್ ಕೊಟ್ಟಿಲ್ಲ ಹಾಗೂ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಾಪಣ್ಣನ ಹೆಂಡತಿಯೇ ಅಲ್ಲ ಹಾಗೂ ನನಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3ನೇ ಪ್ರತಿವಾದಿಯ ಪರ ವಕೀಲರ ಕಡೆಯಿಂದ ಪಾಟೀ ಸವಾಲು ಏನೂ ಇರುವುದಿಲ್ಲ.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.